ಪಿಡಬ್ಲು - 1

**ಸಾಕ್ಷಿಯನ್ನು ದಿನಾಂಕಃ 24.07.2019 ರಂದು ಪುನಃ ಕರೆಯಿಸಿ, ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ 2 ನೆ ಪ್ರತಿವಾದಿ ಪರ ವಕೀಲರು, ಶ್ರೀ ಎಸ್.ಡಿ.ಎಸ್. ರವರಿಂದಃ**

8. ನಾನು ನನ್ನ ಅಕ್ಕ ರೇಣುಕಾರವರ ಮಗಳು ಶಿವಲೀಲಾಳನ್ನು ಮದುವೆಯಾಗಿರುತ್ತೇನೆ. ನನ್ನ ಭಾವಾ ಅಂದರೆ ಶಿವಲೀಲಾಳ ತಂದೆ ಯಾವಾಗ ಮೃತಪಟ್ಟಿದ್ದಾರೆ ಎಂದು ನೆನಪಿಲ್ಲ. ಈಗ ನಾನು ನೋಡುತ್ತಿರುವ ದಾಖಲೆ ನನ್ನ ಮಾವನ ಮರಣ ಪ್ರಮಾಣ ಪತ್ರ ಆಗಿರುತ್ತದೆ ಸದರಿ ಪ್ರಮಾಣ ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ದಾಖಲೆ ಪ್ರಕಾರ ದಿಃ 01.08.2002 ರಂದು ವಿರುಪಾಕ್ಷಪ್ಪ ಮೃತಪಟ್ಟಿದ್ದಾರೆ ಎಂದರೆ ಸರಿ. ವಿರುಪಾಕ್ಷಪ್ಪ ತನ್ನ ಜೀವಿತ ಕಾಲದಲ್ಲಿ ಒಕ್ಕಲುತನ ಮಾಡುತ್ತಿದ್ದರು. ಸಾಕ್ಷಿ ಮುಂದುವರೆದು ಅವರು ಕೆಸಿಸಿ ಬ್ಯಾಂಕಿನಲ್ಲಿ ಸಿಪಾಯಿ ಆಗಿ ಸಹ ಕೆಲಸ ಮಾಡುತ್ತಿದ್ದರು ಎಂದುಹೇಳುತ್ತಾರೆ. ಅವರ ತಿಂಗಳ ವೇತನ ಎಷ್ಟಿತ್ತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಅವರಿಗೆ ತಿಂಗಳಿಗೆ 3 ರಿಂದ 4 ಸಾವಿರ ರೂ. ಸಂಬಳ ಬರುತ್ತಿತ್ತು ಎಂದರೆ ಸಾಕ್ಷಿ ಜಾಸ್ತಿ ಇತ್ತು ಎಂದು ಹೇಳುತ್ತಾರೆ.

9. ರೇಣುಕಾ ಮತ್ತು ವಿರುಪಾಕ್ಷಪ್ಪ ರವರಿಗೆ ಇಬ್ಬರು ಗಂಡುಮಕ್ಕಳು ಮತ್ತು ಮೂರು ಜನ ಹೆಣ್ಣುಮಕ್ಕಳು. ಮೂರೂ ಜನ ಹೆಣ್ಣುಮಕ್ಕಳ ಲಗ್ನ ಆಗಿದೆ. ಕೊನೆಯಮಗಳ ಮದುವೆಯಾಗಿ ಈಗ್ಗೆ 3 ವರ್ಷ ಆಗಿದೆ. ವಿರುಪಾಕ್ಷಪ್ಪ ಇಬ್ಬರು ಹೆಣ್ಣುಮಕ್ಕಳ ವಿವಾಹ ಕಾಲದಲ್ಲಿ ಬದುಕಿದ್ದರು. ಮೂರನೆ ಮಗಳ ವಿವಾಹ ಕಾಲದಲ್ಲಿ ಬದುಕಿರಲಿಲ್ಲ. ವಿರುಪಾಕ್ಷಪ್ಪ ಈ ದಾವೆಯ 5 ನೇ ಪ್ರತಿವಾದಿಯ ಪತಿ ಎಂದರೆ ಸರಿ. ವಿರುಪಾಕ್ಷಪ್ಪನಿಗೆ ಬರುತ್ತಿದ್ದ ಸಂಬಳ ಆತನ ಮನೆ ಖರ್ಚಿಗೆ ಸಾಕಾಗುತ್ತಿತ್ತು ಎಂದರೆ ಸರಿ. ಸಾಕ್ಷಿ ಪುನಃ ಈ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ.

(ಈ ಹಂತದಲ್ಲಿ, ವಕೀಲರ ಕೋರಿಕೆ ಮೇರೆಗೆ, ಮುಂದುವರೆದ ಪಾಟಿಸವಾಲನ್ನು ಮುಂದೂಡಲಾಯಿತು.)

***(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)***

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.